SCCH – 01
MVC No.3638/2020
RW1

**<u>ಸಾಕ್ಷಿಗೆ ದಿನಾಂಕಃ 27.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀಮತಿ ಟಿ.ಆರ್.ಜಿ ವಕೀಲರಿಂದಃ</u>**

1) **2** ನೇ ಎದುರುದಾರ ಸಂಸ್ಥೆಯಲ್ಲಿ ನಾನು ಸಹಾಯಕ ವ್ಯವಸ್ಥಾಪಕನಾಗಿ ಕರ್ತವ್ಯ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ. ನನ್ನ ಹೇಳಿಕೆಗೆ ಸರಿಯಾಗಿ ನಮ್ಮ ವಕೀಲರು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಿದ್ಧಪಡಿಸಿದ್ದಾರೆ.

2) ಅನುಮತಿ ಪತ್ರವನ್ನು ನಿ.ಆರ್.**1** ಎಂದು, ಮತ್ತು ಕೆಎ-**07**-ಎ-**9390** ಸಂಖ್ಯೆಯ ವಾಹನಕ್ಕೆ ನೀಡಿರುವಂತಹ ವಿಮಾ ಪಾಲಿಸಿಯನ್ನು ನಿ.ಆರ್.**2** ಎಂದು, ಬಾಲಚಂದ್ರ ರವರಿಗೆ ನೀಡಿರುವ ನೋಟೀಸಿನ ಕಛೇರಿ ನಕಲನ್ನು ನಿ.ಆರ್.**3** ಎಂದು ಮತ್ತು ಅಂಚೆ ಸ್ವೀಕೃತಿ ಪತ್ರವನ್ನು ನಿ.ಆರ್.**4** ಎಂದು ಗುರುತಿಸಿದೆ.

3) ಆದ ಕಾರಣದಿಂದ ನಮ್ಮ ವಿರುದ್ಧ ಈ ಪ್ರಕರಣವನ್ನು ವಜಾ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಗಿದೆ</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.